ಅಧ್ಯಕ್ಷರು.—ಈಗಾಗಲೇ ೫೦ ಗಮನ ಸೆಳೆಯುವ ಸೂಚನೆಗಳು ಬಂದು ಸೂಕ್ತ ಮಾಹಿತಿಗಾಗಿ ಸರ್ಕಾರದ ಮುಂದೆ ಹೋಗಿವೆ. ಆ ಬಗ್ಗೆ ನಾವು ಪುನಃ ಚರ್ಚೆಯ ಮಾಡಿ ಜಾಗ್ರತೆ ಉತ್ತರ ಕಳುಹಿಸಿ ಎಂದು ಕೇಳಿದ್ದೇವೆ. ಮಾನ್ಯ ಸದಸ್ಯರುಗಳು ಸ್ವಲ್ಪ ಅವುಗಳು ಬರುವವರೆಗೆ ತಾಳ್ಮೆಯಿಂದ ಇರಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ತಮ್ಮ ಕಛೇರಿಯಿಂದ ಕಳುಹಿಸಿದ ನೋಟೀಸ್ ನನಗೂ ಬಂದಿದೆ. ಸಂಬಂಧಪಟ್ಟ ಮಂತ್ರಿಗಳಿಗೂ ಹೋಗಿದೆ. ಆದರೆ ಸಭೆ ಅವಸರದಲ್ಲಿ ಸೇರಿದ್ದರಿಂದ ಉತ್ತರ ಕೊಡಲು ಸ್ವಲ್ಪ ತಡವಾಗಿದೆ. ಆದಷ್ಟು ಜಾಗ್ರತೆ ಅಸೆಂಬ್ಲಿ ಮುಗಿಯುವುದರೊಳಗೆ ತರಿಸಿಕೊಡಲು ಪ್ರಯತ್ನಿಸುತ್ತೇನೆ.

ಒಬ್ಬ ಸದಸ್ಯರು.—ಕುಡಿಯುವ ನೀರಿನ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿ ೧೨ ದಿವಸಗಳಾದರೂ ಇನ್ನೂ ಬರಲಿಲ್ಲ.

ಅಧ್ಯಕ್ಷರು.—ಆ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಸಾರಿ ಉತ್ತರ ಹೇಳಿದ ಮೇಲೂ ಪುನಃ ಶುರು ಮಾಡಿದರೆ ಏನು ಪ್ರಯೋಜನ? In the light of the reply given by the Hon. Minister, Hon. Members are requested to resume their seats.

ಶ್ರೀ ಕೆ. ಹೆಚ್. ರಂಗನಾಥ್.—ಯಾವ ಯಾವ ತಾಲ್ಲೂಕಿನಲ್ಲಿ ಬೋರ್‌ವೆಲ್ಲಿಗೆ ಹಾಕಿದಂತಹ ಹ್ಯಾಂಡ್ ಪಂಪುಗಳು ಕೆಟ್ಟು ಹೋಗಿವೆ ಅವುಗಳನ್ನು ತಕ್ಷಣ ರಿಪೇರಿ ಮಾಡಬೇಕೆಂದೂ ಹಾಗೂ ರಿಪೇರಿ ಮಾಡಿದ ಬಗೆ ವಾರದೊಳಗೆ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ಆದೇಶ ನೀಡಿದ್ದಾರೆ.

Calling attention to matters of urgent Public Importance

(i) re : Non-supply of sugar through ratioh-shops.

SRI T. R. SHAMANNA (Basavanagudi).— Sir, I Call the attention of the Hon'ble Minister forFood and Forest to the hardship caused to the public due to non-supply of sugar through ration shops.

SRI G. RAME GOWDA (Minister for Food and Forests).— Sir I beg to make the following statement.

ಶ್ರೀ ಪಿ. ರಾಮದೇವ್.—ಇಂಗ್ಲೀಷಿನಲ್ಲಿ ಬೇಡ, ಕನ್ನಡದಲ್ಲಿ ಉತ್ತರ ಕೊಡಬೇಕು.

ಶ್ರೀ ಜಿ. ರಾಮೇಗೌಡ.—ಕನ್ನಡದಲ್ಲಿ ಮಾತನಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಅಂಕಿ ಅಂಶಗಳು ಸರಿಯಾಗಿ ಸಿಗುವುದಿಲ್ಲವೆಂದು ಇಂಗ್ಲೀಷಿನಲ್ಲಿ ಕೊಟ್ಟಿರುವುದರಿಂದ ಓದುತ್ತೇನೆ. ನಂತರ ಕನ್ನಡದಲ್ಲಿ ಚೆನ್ನಾಗಿ ಹೇಳುತ್ತೇನೆ.

ಶ್ರೀ ಮಳ್ಳೂರ್ ಆನಂದರಾವ್.—ಅದನ್ನು ಕನ್ನಡಕ್ಕೆ ತರ್ಜುಮೆ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಜಿ. ರಾಮೇಗೌಡ.—ಕಾಲಿಂಗ್ ಅಟೆನ್‌ಷನ್ ನೋಟೀಸೇ ಇಂಗ್ಲೀಷಿನಲ್ಲಿ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕನ್ನಡದಲ್ಲಿ ಪ್ರಶ್ನೆ ಕೇಳಿದ್ದರೆ ಅವರಿಗೆ ಕನ್ನಡದಲ್ಲಿಯೇ ಉತ್ತರಿಸಿದರೆ ಸೂಕ್ತ.

ಒಬ್ಬ ಸದಸ್ಯರು.—ಬಹು ಮಂದಿ ವಿರೋಧ ಪಕ್ಷದ ಸದಸ್ಯರು ಇಂಗ್ಲೀಷಿನಲ್ಲೇ ಮಾತನಾಡುತ್ತಾರೆ

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸ್ ಇಲ್ಲದೆ ಹಾಗೆಲ್ಲ ಮಧ್ಯೆ ಮಧ್ಯೆ ಎದ್ದು ಮಾತನಾಡಬಾರದು.

SRI G. RAME GOWDA.—The levy sugar allotment for distribution through the public distribution system for the State is being made monthly by the Directorate of Sugar, Government of India. The normal allotment made on the basis of the projected population of the State is 14,237.7 tonnes per month.

On receipt of the allotmet from the Government of India by the State Government, the same is communicated to the Directorate of Food and Civil Supplies and also to the Managing Director of the Karnataka State Co-operative Marketing Federation. The Director of Food and Civil Supplies makes allocation to the Deputy Commissioners and the Joint Director of Informal Rationing. On receipt of such allocation from the Director of Food and Civil Supplies they ascertain the grade and rate of sugar from the respective factories. On receipt of such information, the Deputy Commissioners and the Joint Director (Informal Rationing) make sub allotments to their wholesalers duly giving them a costing sheet to enable them to make payment to the sugar factories and to lift the sugar therefrom. After receipt of the sugar by the wholesalers they distribute to the retail agents and the retail agents distribute the sugar to the consumers. It is ensured that the sugar meant for a particular month is lifted during the month only and is made available to the consumers.

There has been some delay in the distribution of levy sugar through the fair price shops in March in Bangalore due to the unavoidable circumstances enumerated below.

In the month of February 1978, 18 out of 20 sugar factories filed writs in the High Court of Karnataka aganinst the ex-factory prices of levy sugar fixed by the Government of India for 1977-78. season. The High Court of Karnataka in respect of a batch of 10 factories passed an Interim Order on 10-2-1978 directing the Government of India to lift the levy sugar from the petitionef factories after paying a price of Rs. 226 per quintal instead or Rs. 173·44P per quintal subject to the condition that the petitioner factories shall furnish a Bank Guarantee for the difference between the notified price of Rs. 173-44P and the price directed to be paid pursuant to the Interim Order. They also gave retrospective effect to their order from 22-12-1977. However, while passing another Interim Order on 17-2-1978 on a further batch of Writ Petitions, the High Court modified its earlier Order to the extent that the Order would be effective only prospectively and that the Petitioner factories should give the Bank Guarantee for the differential cost by the 20th of the succeeding month failing which they have to pay an interest of 12½% on the capital amount with-held.

Due to this order, the sugar factories wrote to the Director of Food & Civil Supplies and other Unit Officers to lift the sugar by paying the higher price ordered by the High Court of Karnataka. Since the State Government was not made a party by the Writ Petitioners, the Dire tor had to ascertain from the Councel for the Government of India about the correct position. The fact was thereafter reported to the Government by the Director of Food & Civil Supplies and as directed by Government, the Director of Food & Civil Supplies intimated the fact to the Government of India by Telex and sought instructions whether to pay the higher price for levy sugar as ordered by the High Court of Karnataka. The Commissioner & Secretary to Government, Food and Forest Department also communicated to the Government of India, about this and sought instru tions from the Government of India. The Government of India intimated that there was no alternative but to lift the sugar at the higher price ordered by the High Court of Karnataka. Thereafterwards the Director of Food and Civil Supplies issued instructions to the Unit Officers and the Karnataka State Co-operative Marketing Federation to lift the sugar by paying the higher price. At that stage, the Karnataka Co-operative Marketing Federation, the wholesale agent of Government intimated that they were not in a position to lift the sugar at a higher price on account of financial difficulties and wanted that the State Government should advance to the n the amount equivalent to the difference between the notified price of the Government of India and the price ordered by the High Court of Karnataka.

The Government took immediate decision to advance amounts from the PD accounts kept with the Director of Food and Civil Supplies and the Deputy Commissioners of Districts, to meet the differential due to the increase in the price and order was issued accordingly. The price differential between the revised notified price and the High Court Order works out to Rs. 40 to Rs. 50 per quintal.

In the meanwhile, the Government of India revised the issue price of sugar from 1st March 1978 from Rs. 2.15P to Rs. 2-30P per Kg. and also enhanced the ex-factory prices of different grades of sugar from that date by about Rs. 18-50 P per quintal. Again the costing sheets had to be revised by the Unit Officers. Costing sheets were accordingly issued.

Again on 10th March 1978 all the sugar factories have challenged in a Writ Petition the increased notified price of the Government of India and on these, the High Court of Karnataka confirmed their previous order on 10th March 1978. A copy of that order could be obtained with much difficulty only on 15th March 1978. The

Commissioner and Secretary to Government, Food and Forest Department immediately directed the Karnataka Marketing Federation to lift the sugar and to distribute it to the consumers without any delay It could thus be seen that the delay in distribution of sugar to the consumers is due to the fact that the High Court of Karnataka passed three orders (on 10-2-1978, 17-2-1978 and 10-3-1978) within a period of one month necessitating revision of costing sheets and their intimation to the sugar factories apart from obtaining clearance from Government of India and making available the required additional finance to the Marketing Federation/TAPCMS. Even though the State Government was not a party, prompt action to ascertain the development from time to time was taken by the Department.

Further during the above period, the Government of India revised the notified price of sugar and its issue price to the consumers.

All these facts together account for the unavoidable delay in distributing sugar to the consumers.

Because of the dislocation, the reasons for which have been explained above even the quota of levy sugar for the month of February 78 was not completely lifted by the end of February for the Bangalore Informal Rationing Area. However realising the reasons for dislocation, Govt. of India extended the time for lifting February quota of levy sugar up to the end of March 1978. for Bangalore Informal Rationing area. Except 200 quintals of February quota of levy sugar the entire quantity has been lifted and distributed in Bangalore Informal Rationing Area. These 200 quintals are to be transported from Bidar Co-operative Sugar Factory which is expected to be done during the next two-three days.

Regarding the lifting of quota of levy sugar for Bangalore InformalRationing Area for themonth of March the latest position has been ascertained from the Marketing Federation which is the wholesalr agent for the entire Karnataka State It is that out of little ovee 21,000 quintals, so for a little over 13,000 quintals have already been lifted and distributed in Bangalore It is hoped that during the next few days the entire quantity of levy sugar for the Informal Rationing Area in Bangalore for the month of March 1978 will be lifted and distributed.

However, all these difficulties are now solved and the sugar has already started arriving at Bangalore and by about 25th of this month sugar distribution will be normalised.

As on date 5,835 quintals of sugar have been received in Bangalore (in the month of March 1978). In addition to this there was an opening balance of 1,984 quintals of sugar in Informal Rationing Area in Bangalore City at the beginning of the month. This quantity is being distributed in Bangalore.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಸಕ್ಕರೆ ಪರಿಸ್ಥಿತಿ ಹೀಗಿದ್ದಾಗ್ಯೂ ಕೂಡ ದಿನೇ ದಿನೇ ಇದರ ಪರಿಸ್ಥಿತಿ- ಇದರ ಕಹಿ ಜಾಸ್ತಿಯಾಗುತ್ತಾ ಇದೆ.

ಮೊದಲನೆಯದಾಗಿ ಹೇಳುವುದೇನೆಂದರೆ ಒಂದು ತಿಂಗಳಿನಿಂದಲೂ ಕೂಡ ಬೆಂಗಳೂರು ನಗರದಲ್ಲಿ ಸಕ್ಕರೆ ಸಿಗದೇ ಇದ್ದುದು ಬಹಳ ಶೋಚನೀಯವಾದ ವಿಚಾರವಾಗಿದೆ. ಮಾನ ಸಚಿವರು ಈ ಬಗ್ಗೆ ವಿವರಣೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಒಂದು ವಿಷಯ ಏನೆಂದರೆ ಈಗ ಸಕ್ಕರೆ ಸಿಗದೆ ಇದ್ದುದರ ಜೊತೆಗೆ ಬೆಂಗಳೂರು ನಾಗರಿಕರಿಗೆ ಕೋಟಾನೂ ಕೂಡ ಕಡಿಮೆಯಾಗುತ್ತಾ ಇದೆ. ಮೊದಲು ಒಬ್ಬ ವ್ಯಕ್ತಿಗೆ ೧೦೦೦ ಗ್ರಾಂ ಸಿಕ್ಕುತ್ತಾ ಇದ್ದುದು ೮೫೦ ಗ್ರಾಂಗೆ ಇಳಿದಿದೆ, ಈಗ ಅದನ್ನು ಮತ್ತೆ ೪೫೦ ಗ್ರಾಂಗೆ ಇಳಿಸುವ ಪ್ರಯತ್ನ ನಡೆಯುತ್ತಾ ಇದೆ, ಜೊತೆಗೆ ರೇಟ್ ಕೂಡ ಒಂದು ಕಿಲೋಗೆ ೧೫ ಪೈಸೆ ಜಾಸ್ತಿಯಾಗಿದೆ. ಇನ್ನು ಸಕ್ಕರೆ ನಮಗೆ ಕೇಂದ್ರದಿಂದ ೯ ಸಾವಿರ ಟಿಲ್ಲರೆ ಕ್ವೊಂಟಾಲ್ ಸಿಕ್ಕುತ್ತಾ ಇದ್ದುದ್ದು ೧೪ ಸಾವಿರ ಟಿಲ್ಲರೆ ಕ್ವಿಂಟಾಲ್ ಸಕ್ಕರೆಯನ್ನು ಕಳುಹಿಸಲು ಏರ್ಪಾಡಾಗಿರುವಾಗ, ಪರಿಸ್ಥಿತಿ ಹೀಗಿರುವಾಗ ಬೆಂಗಳೂರು ನಾಗರೀಕರಿಗೆ ಅವರಕೋಟಾವನ್ನು ಕಡಿಮೆ ಮಾಡಿದರೆ ತೊಂದರೆಯಾಗುವುದಿಲ್ಲವೇ? ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಉಪಯೋಗಿಸುವುದಕ್ಕೋಸ್ಕರ ಪಟ್ಟಣದವರಿಗೆ ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಗ್ರಾಮಾಂತರ ಪ್ರದೇಶದ ಜನರಿಗೆ ಸಕ್ಕರೆಯನ್ನು ಕೊಡುವುದು ಬೇಡ ಎಂದು ನಾನು ಹೇಳುವುದಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಸಕ್ಕರೆ ಉಪಯೋಗಿಸುವವರು ಪಟ್ಟಣದವರೇ ಹೊರತು ಗ್ರಾಮಾಂತರದವರಲ್ಲ. ನೀವು ಈರೀತಿ ಮಾಡುವುದಾದರೆ ಹೆಚ್ಚಿಗೆ ಸಕ್ಕರೆ ಬ್ಲಾಕ್ ಮಾರ್ಕೆಟ್‌ನಲ್ಲಿ ಹೋಗುವುದಕ್ಕೆ ಅವಕಾಶವಾಗುತ್ತದೆ ? ಆದುದರಿಂದ ಇದಕ್ಕೆ ಅವಕಾಶ ಇಲ್ಲದೆ, ಇರುವ ಹಾಗೆ ಏನು ಏರ್ಪಾಡು ಮಾಡಿದ್ದೀರಾ ? ಅಷ್ಟೇ ಅಲ್ಲದೆ ಅಡಿಷನಲ್ ಸಪ್ಲೈ ಕೂಡ ಕೊಟ್ಟಿದ್ದಾರೆ ಇದರ ಜೊತೆಗೆ ಗ್ರಾಮಾಂತರ ಪ್ರದೇಶದವರೂ ಕೂಡ ಸಕ್ಕರೆಯನ್ನು ಎಷ್ಟು ಉಪಯೋಗಿಸುತ್ತಾರೋ ಅನ್ನುವುದು ಗೊತ್ತಿಲ್ಲ. ಆದುದರಿಂದ ದಯವಿಟ್ಟು ಈ ಸಕ್ಕರೆಯನ್ನು ಬ್ಲಾಕ್‌ಮಾರ್ಕೆಟಿಗೆ ಹೋಗದೇ ಇದ್ದ ಹಾಗೆ ಫೇರ್‌ಪ್ರೈಸ್ ಷಾಪ್‌ನಲ್ಲಿ ಕೊಡುವ ಹಾಗೆ ಏನು ಏರ್ಪಾಡು ಮಾಡಿದ್ದೀರಾ ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ರಾಮೇಗೌಡ.—ಬ್ಲಾಕ್‌ಮಾರ್ಕೆಟ್‌ನಲ್ಲಿ ಸಕ್ಕರೆ ಹೋಗದೇ ಇರುವ ಹಾಗೆ ಮಾಡುವುದಕ್ಕೆ ಪ್ರತಿಯೊಬ್ಬರ ಸಹಕಾರವೂ ಬೇಕಾಗಿರುವುದರಿಂದ ತಮ್ಮೆಲ್ಲರನ್ನೂ ಸಹಕಾರ ಕೊಡಬೇಕೆಂದು ಕೋರುತ್ತೇನೆ. ಹಾಗಾದರೆ ಕಡಿಮೆ ಮಾಡಬಹುದು. ಈ ಒಂದು ಆದೇಶ ಕೇಂದ್ರ ಸರ್ಕಾರದಿಂದ ಬಂದಿದ್ದರೂ ಕೂಡ ನಾವು ಒಂದೇ ಸಾರಿ ರೆಡ್ಯೂಸ್ ಮಾಡುವುದಕ್ಕೆ ಹೋಗುವುದಿಲ್ಲ. ಗ್ರಾಮಾಂತರ ಪ್ರದೇಶಕ್ಕೆ ಎಷ್ಟು ಸಕ್ಕರೆ ಬೇಕಾಗುತ್ತದೆ ಎಂದು ನೋಡಿಕೊಂಡು ಕ್ರಮೇಣ ಕಡಿಮೆ ಮಾಡಬೇಕು ಅನ್ನುವ ಉದ್ದೇಶ ಇದೆ. ಇದನ್ನು ಒಂದು ಫೇಸ್ಡ್ ಪ್ರೋಗ್ರಾಂ ಪ್ರಕಾರ ನಡೆಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ ಅಷ್ಟೆ.

SRI P. RAMDEV.—It is stated in the reply of the Hon'ble Minister that the 'normal allotment based on...'

(೫-೬ ಜನ ಮಾನ್ಯ ಸದಸ್ಯರುಗಳು ಎದ್ದುನಿಂತುಕೊಂಡು ಕನ್ನಡದಲ್ಲಿ ಹೇಳಬೇಕು ಎಂದು ಒತ್ತಾಯ ಮಾಡಿದರು)

(ಸಭೆಯಲ್ಲಿ ಗೊಂದಲ)

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳು ಇಲ್ಲಿ ಇಂಗ್ಲೀಷ್‌ನಲ್ಲಿ ಉತ್ತರ ಕೊಟ್ಟಿರುವುದರಿಂದ ನಾನು ಅದನ್ನು ಓದುತ್ತಿದ್ದೇನೆಯೇ ಹೊರತು ಮಾತನಾಡುತ್ತಾ ಇಲ್ಲ.

ಶ್ರೀ ಮಳ್ಳೂರ್ ಆನಂದರಾವ್.—ನಾವು ಈ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೇವೆ. ಆ ಬಗ್ಗೆ ಅವರಿಗೆ ಕನ್ನಡದಲ್ಲಿ ಹೇಳುವುದಕ್ಕೆ ಶಕ್ತಿ ಇಲ್ಲ ಎಂದು ಕಾಣುತ್ತದೆ. ಸ್ವಾಮಿ, ಅಧ್ಯಕ್ಷರೇ ನಮ್ಮ ಸಂಖ್ಯಾ ಬಲ ೫೪ ಇದೆ ಅವರ ಸಂಖ್ಯಾ ಬಲ ೧೫೦ ಇದೆ, ದಯವಿಟ್ಟು ನೀವು ನಮಗೆ ರಕ್ಷಣೆ ಕೊಡಬೇಕು.

ಶ್ರೀ ಕೆ. ಹೆಚ್ ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕಳುಹಿಸಿದಂಥಾ ನೋಟೀಸ್ ಕನ್ನಡದಲ್ಲಿದೆಯೋ, ಇಂಗ್ಲೀಷ್‌ನಲ್ಲಿದೆಯೋ ದಯಮಾಡಿ ನೋಡಿ.

ಅಧ್ಯಕ್ಷರು.—೪-೫ ಜನ ಸದಸ್ಯರುಗಳು ಎದ್ದು ನಿಂತುಕೊಂಡು ಈ ರೀತಿ ಮಾತನಾಡುತ್ತಾ ಹೋದರೆ ಅದು ರೆಕಾರ್ಡ್ ಆಗುವುದಿಲ್ಲ.

(ಸಭೆಯಲ್ಲಿ ಗೊಂದಲ)

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಹಣಕಾಸಿನ ಸಚಿವರು ನಿನ್ನೆ ದಿವಸ ಬಜೆಟ್ಟನ್ನು ಇಂಗ್ಲೀಷ್‌ನಲ್ಲಿ ಓದುತ್ತಿದ್ದಾಗ ಮಾನ್ಯ ಸದಸ್ಯರು ಕನ್ನಡದಲ್ಲಿ ಓದಬೇಕೆಂದು ಒತ್ತಾಯ ಮಾಡಿದ್ದರು. ಆದರೆ ಈವಾಗ ಅವರೇ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದಾರೆ. ನಿನ್ನೆ ಅವರು ಮಾಡಿದ ಪ್ರತಿಕ್ರಿಯೆಯನ್ನು ನಮ್ಮ ಸ್ನೇಹಿತರು ಈಪ್ರೊತ್ತು ತೋರಿಸುತ್ತಾ ಇದ್ದಾರೆ.

ಶ್ರೀ ಪಿ. ರಾಮದೇವ್.—ನಾನು ಇಂಗ್ಲಿಷ್‌ನಲ್ಲಿ ವಾಖ್ಯಾನ ಮಾಡುತ್ತಾ ಇಲ್ಲ. ಮಾನ್ಯ ಸಚಿವರು ಹೇಳಿರತಕ್ಕಂಥಾದ್ದು ಈ ಸ್ಟೇಟ್‌ಮೆಂಟ್‌ನಲ್ಲಿರುವ ಒಂದು ವಾಕ್ಯವನ್ನು ಓದಿದ್ದೇನೇ ಹೊರತು ನಾನು ಮತ್ತೇನೂ ಮಾಡುತ್ತಾ ಇಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಇದರ ಬಗ್ಗೆ ಏನಾದರೂ ಇದ್ದರೆ ಸೃಷ್ಟೀಕರಣ ಕೇಳಬೇಕೇ ವಿನಾ ಈ ರೀತಿ ಸಭೆಯಲ್ಲಿ ಗೊಂದಲ ಮಾಡಿ ಈ ಸಭೆಯ ಕಾಲವನ್ನು ಹರಣ ಮಾಡಬಾರದು ಎಂದು ಹೇಳುತ್ತೇನೆ. ಮಾನ್ಯ ಸದಸ್ಯರು ಯಾರಾದರೂ ಈ ರೀತಿ ಎದ್ದು ನಿಂತುಕೊಂಡು ಅನುಮತಿ ಇಲ್ಲದೆ ಮಾತನಾಡಿದರೆ ಅದು ರಿಕಾರ್ಡ್ ಆಗುವುದಿಲ್ಲ. ದಯವಿಟ್ಟು ಆದಷ್ಟು ಮಟ್ಟಿಗೆ ಇಂಥಾ ಗೊಂದಲ ಮಾಡಾ ವುದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. If they get up like this I may tolerate once or twice Thereafter I will have to pass remarks against such members.

ಶ್ರೀ ಪಿ. ರಾಮದೇವ್.—ಸ್ವಾಮಿ, ಈ ಬಗ್ಗೆ ನಾನು ಎರಡು ವಿವರಗಳನ್ನು ತಮ್ಮ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಇದರಲ್ಲಿ ಪ್ರೊಜೆಕ್ಟಡ್ ಪಾಪುಲೇಷನ್ ಮತ್ತು ಅಲಾಟ್‌ಮೆಂಟ್ ಅಂತ ಏನು ಇದೆ ಅದಕ್ಕೂ ಇದಕ್ಕೂ ಸಂಬಂಧ ಏನು ಇದೆ ಅನ್ನುವುದನ್ನು ಹೇಳು ತ್ತೀರಾ ಮತ್ತು ನಮ್ಮ ರಾಜ್ಯಕ್ಕೆ ಸಕ್ಕರೆ ಅಲಾಟ್‌ಮೆಂಟ್ ೧೪,೨೩೭ ಕ್ವಿಂಟಾಲ್ ಪ್ರತಿ ತಿಂಗಳೂ ಕೋಟಾ ಬರುತ್ತದೆಯೇ ಅನ್ನುವುದಕ್ಕೆ ವಿವರಣೆ ಬೇಕು. ಇಷ್ಟು ಸಕ್ಕರೆ ನಮ್ಮ ರಾಜ್ಯಕ್ಕೆ ಬರುತ್ತಾ ಇದ್ದರೂ ಕೂಡ ಮಾರ್ಚಿ ತಿಂಗಳಿನಲ್ಲಿ ಬೆಂಗಳೂರಿನವರಿಗೆ ಎಷ್ಟು ಕಷ್ಟವಾಯಿತು ಎನ್ನುವುದು ಎಲ್ಲರಿಗೂ ಗೊತ್ತಿ ರುವ ವಿಚಾರ. ಏತಕ್ಕೆ ಇಷ್ಟು ಕಷ್ಟವಾಯಿತು ಅನ್ನುವ ಬಗ್ಗೆ ವಿವರಣೆ ಬೇಕು. ಫೆಬ್ರುವರಿ ತಿಂಗಳಿನ ಕೋಟಾದಲ್ಲಿ ಡಿಲೇ ಆಗಿದ್ದುದ್ದು ಎಲ್ಲರಿಗೂ ಗೊತ್ತು. ಹಾಗಿದ್ದರೂ ಕೂಡ ಮತ್ತೆ ಮಾರ್ಚಿ ತಿಂಗಳ ನಲ್ಲಿ ಮತ್ತೆ ಡಿಲೇ ಆಗಿ ಈಗ ಸರ್ಕಾರದವರು ಸ್ವಲ್ಪ ಮಟ್ಟಿಗೆ ರಿಲೀಸ್ ಮಾಡಿದ್ದಾರೆ. ಇದರಿಂದ ಬ್ಲಾಕ್ ಮಾರ್ಕೆಟ್‌ಗೆ ಹೋಗುತ್ತಾ ಇದೆಯೋ ವಿನಾ ಕನ್‌ಸ್ಯೂಮರ್ಸ್‌ಗೆ ಹೋಗುತ್ತಾ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು ಎಂದು ಕೇಳುತ್ತೇನೆ.

1-30 ಪಿ. ಎಂ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಮಂತ್ರಿಗಳವರಿಗೆ ಅಧ್ಯಕ್ಷರ ಮುಖಾಂತರ ಒಂದು ವಿಚಾರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ ಎಲ್ಲಾ ಭಾಗಕ್ಕೂ ಸರಿಯಾದ ರೀತಿಯಲ್ಲಿ ಸಕ್ಕರೆ ಹಂಚಿಕೆ ಮಾಡಿ ಬೆಂಗಳೂರಿಗೆ ಮಾತ್ರ ತಾಪತ್ರಯ ಮಾಡಿದ್ದಾರೆ. ಎಂದರೆ ಇವರ ಪಾರ್ಟಿ ಹೆಚ್ಚು ಸ್ಥಾನಗಳನ್ನು ಇಲ್ಲಿ ಗೆಲಿಸಲಿಲ್ಲ ಎಂದು ಈ ರೀತಿ ಮಾಡಿದ್ದಾರೆ.

ಒಬ್ಬ ಸದಸ್ಯರು :— ಮಾನ್ಯ ಸದಸ್ಯರು ಹೇಳತಕ್ಕ ಮಾತು ಸರಿಯಲ್ಲ. ಅವರು ಹೇಳತಕ್ಕ ಮಾತನ್ನು ಅವರು ವಾಪಸ್ಸು ಪಡೆಯಬೇಕು.

ಶ್ರೀ ಬಿ. ಭಾಸ್ಕರ್‌ಶೆಟ್ಟಿ.—ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ನಾವು ಇಲ್ಲಿ ಸಕ್ಕರೆ ವಿತರಣೆ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇವ್ರೊತ್ತು ಹಳ್ಳಿ ಮತ್ತು ಪಟ್ಟಣಗಳಿಗೆ ಸರಿಸಮಾನಾಗಿ ಹಂಚಬೇಕು ಎಂದು ಹೇಳಿರತಕ್ಕ ಮಾತು ಕೇಂದ್ರ ಸರ್ಕಾರದವರದ್ದು ಎನ್ನುವ ಮಾತನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಜಿ. ರಾಮೇಗೌಡ.—ಪ್ರಾಜೆಕ್ಟ್ ಪ್ರಾಪ್ಯುಲೇಷನ್ ಎಷ್ಟು ಇದೆ, ಎನ್ನುವ ಬಗ್ಗೆ ಈಗ ನನ್ನಲ್ಲಿ ವಿವರ ಇಲ್ಲ, ಅದನ್ನು ಮಾನ್ಯ ಸದಸ್ಯರಿಗೆ ಬೇಕಾದರೆ ಒದಗಿಸುತ್ತೇನೆ. ಇವೊತ್ತು ಮಾನ್ಯ ಸದಸ್ಯರು ಗ್ರಾಮಾಂತರ ಪ್ರದೇಶದವರಿಗೆ ಕೊಟ್ಟಿದ್ದಾರೆ ಬೆಂಗಳೂರಿಗೆ ಏತಕ್ಕೆ ಇಲ್ಲ ಎಂದು ಕೇಳುವುದು ಮುಖ್ಯ ಅಲ್ಲ. ಗ್ರಾಮಾಂತರ ಪ್ರದೇಶದವರಿಗೂ ಕೂಡ ಸಕ್ಕರೆ ಹಂಚತಕ್ಕ ವ್ಯವಸ್ಥೆ ಇದೆ. ಮಾನ್ಯ ಸದಸ್ಯರು ಆತುರ ಬಿದ್ದು ಹಾಗೆ ತಿಳಿದುಕೊಂಡಿದ್ದು ಅವರ ಮನಸ್ಸಿನ ವರ್ತನೆಯನ್ನು ಹೇಳುತ್ತಿದ್ದಾರೆ. ಇನ್ನು ಫೆಬ್ರುವರಿ ಕೋಟಾ ೨೦೦ ಕ್ವಿಂಟಾಲ್ ಮಾತ್ರ ಇದೆ ಅದು ಡ್ರಾ ಮಾಡಿದಾಗ ಕಠಿಣವಾದ ಇನ್‌ಸ್ಟ್ರಕ್ಷನ್ ಕೊಟ್ಟು ಅದು ಬ್ಲಾಕ್ ಮಾರ್ಕೆಟ್ ಆಗದಂತೆ ನೋಡಿಕೊಳ್ಳುತ್ತೇನೆ.

(ii) re : Closure of Government Hostel for SCs and STs at Hassan.

SRI K. H. HANUME GOWDA (Hassan).— I call the attention of the Minister for Law and Social Welfare and Backward Classes to the closure of Government Hostel for Scheduled Castes and Scheduled Tribes at Hassan for 25th March 1978.

SRI L. G. HAVANUR (Minister for Law, Social Welfare and Backward Classes) : I beg to make the followlng Statement.—

In Hassan, during the current academic year, there are 182 boarders belonging to Scheduled Castes and Scheduled Tribes in the Hostel attached to the Government College. Even though all the boarders in the Hostel happen to belong to Scheduled Cates/Scheduled Tribes, the Hostel is actually a General Hostel, being administered by the Principal of the College under the administrative control of the Directorate of Collegiate Education. Ninety five boarders studying for degree courses would have to stay in the Hostel till about the end of June 1978 and the rest till the end of April 1978. Mess and maintenance charges are expected to be realised by the Hostel authorities through the Government of India Scholarship amount and Extra Boarding and Lodging Charges sanctioned by the Department of Social Welfare. Each Boarder is given scholarship as well as Extra Boarding and Lodging charges to an extent of Rs. 125 P.M. However, the actual expenditure so far incurred during the current year works out to Rs. 140 per month per boarder. In this way, the Hostel authorites are obliged to cope with a deficit of about Rs. 25,000 during the current year. In the circumstances, the Hostel authorities had thought of closing the mess by 25th March 1978, ostensibly with a view to adjusting the excess expenditure out of the scholarship amount and Extra Boarding and Lodging charges payable for April 1978.

2. As the closure of the Hostel will cause inconvenience to the boarders, the Principal has been advised to treat the problem of arrears as a separate issue and to continue to run the mess till the end of June 1978, limiting actual expenditure to Rs. 125 per boarder per